ಆದ್ದರಿಂದ ಬಹಳ ಪರಿಣಾಮಕಾರಿಯಾಗಿ ಈ ಕೆಲಸ ಅನೇಕ ಕಡೆ ನಡೆದಿಲ್ಲ ಎನ್ನುತಕ್ಕದ್ದು ನಮ್ಮ ಗಮನಕ್ಕೆ ಬಂದಿದೆ. ಆದರೆ ಅನೇಕ ಜನ ಲೆಜಿಸ್‌ಲೇಟರ್ಸ್ ನನಗೆ ಪತ್ರವನ್ನು ಬರೆದು ನಾಡ ಕಛೇರಿಗಳು ಕೆಲವು ಕಡೆ ಉತ್ತಮವಾಗಿ ಕೆಲಸ ಮಾಡುತ್ತಿವೆ, ಆದುದರಿಂದ ಅವುಗಳನ್ನು ಮುಂದುವರಿಸಿ ಎಂದು ತಿಳಿಸಿದ್ದಾರೆ. ನನಗೆ ನೂರಕ್ಕಿಂತ ಹೆಚ್ಚು ಲೆಜಿಸ್‌ಲೇಟರ್ಸ್ ಕಾಗದ ಬರೆದಿದ್ದಾರೆ. ಬಹುಶಃ ಸೈಕ್ಲೊಸ್ಟೇಲ್ ಕಾಪಿ ಮಾಡಿ ಕಳಿಸಿದ್ದರು, ಎಲ್ಲರೂ ಸಹಿ ಮಾಡಿದ ಹಾಗೆ ಕಾಣುತ್ತದೆ. ಇದನ್ನು ಕಂಟಿನ್ಯೂ ಮಾಡಿ ಎಂದು ಕಳಿಸಿದ್ದಾರೆ. ಕೆಲವರು ಇದನ್ನು ನಿಲ್ಲಿಸಿ ಎಂದು ಹೇಳುತ್ತಾರೆ ಮತ್ತೆ ಕೆಲವರು ಇದನ್ನು ಮುಂದುವರೆಸಿ ಎಂದು ಹೇಳಿದ್ದಾರೆ, ನಮ್ಮ ಇಲಾಖೆಯ ವರದಿಗಳು ಬಂದಿದೆ.

ಅಧ್ಯಕ್ಷರು : ಸೈಕ್ಲೊಸ್ಟೇಲ್ ಮಾಡಿದ್ದಾರೆ ಎಂದ ಮೇಲೆ ಸ್ವಲ್ಪ ಅನುಮಾನ ಬರುತ್ತದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ : ನಿರ್ದಿಷ್ಟವಾಗಿ ಕೊಡಗು ಮತ್ತು ಮಲೆನಾಡಿನ ಪ್ರದೇಶದಲ್ಲಿ ಈ ನಾಡ ಕಛೇರಿಗಳು ಸ್ವಲ್ಪಮಟ್ಟಿಗೆ ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿವೆ ಎಂಬ ವರದಿ ಇದ್ದ ಕಾರಣ ಆ ಒಂದು ಬೇಸಿಸ್ ಮೇಲೆ ಹಿಂದಿನ ಮುಖ್ಯಮಂತ್ರಿಗಳಾದ ಶ್ರೀ ಗುಂಡೂರಾವ್‌ರವರು ಇದಕ್ಕೆ ಹೆಚ್ಚಿನ ಒತ್ತು ಕೊಟ್ಟಿದ್ದರು; ಏಕೆಂದರೆ, ಅವರ ವಿರಿಯಾದಲ್ಲಿ ಈ ನಾಡಕಛೇರಿಗಳು ಚೆನ್ನಾಗಿ ಕೆಲಸ ಮಾಡುತ್ತಿತ್ತು ಮತ್ತು ಅದಕ್ಕೆ ಸಂಪೂರ್ಣವಾದ ಅಧಿಕಾರ ಇತ್ತು. ಆದರೆ ಈಗ ನಾವು ಈ ನಾಡ ಕಛೇರಿಗಳಿಗೆ ಹೆಚ್ಚಿನ ಅಧಿಕಾರವನ್ನು ಕೊಟ್ಟಿಲ್ಲ. ಆದುದರಿಂದ ಅವು ಸರಿಯಾಗಿ ಕೆಲಸ ಮಾಡಲು ಸಾಧ್ಯವಾಗುತ್ತಿಲ್ಲ. ಆದುದರಿಂದ ಈ ನಿಟ್ಟಿನಲ್ಲಿ ಸದ್ಯಕ್ಕೆ ಮಾರ್ಚ್‌ವರೆಗೆ ಅವುಗಳು ಇರಲಿ,ಮುಂದೆ ಈ ನಾಡ ಕಛೇರಿಗಳ ಕೆಲಸವನ್ನು ನೋಡಿ ತೀರ್ಮಾನವನ್ನು ತೆಗೆದುಕೊಳ್ಳಬೇಕು ಎಂದು ಮಾಡಿದ್ದಕ್ಕಾಗಿ ಅದು ಪರಿಶೀಲನೆಯಲ್ಲಿದೆಯೆಂದು ಹೇಳಿದ್ದೇವೆ.

ಶ್ರೀ ಟಿ.ಬಿ.ಚಿಯಚಂದ್ರ : ಸೈಕ್ಲೋಸ್ಟೇಲ್ ಪ್ರತಿ ನನ್ನ ಬಳಿಯೂ ಬಂದಿತ್ತು, ನಾನು ಅದಕ್ಕೆ ಸಹಿ ಮಾಡಲಿಲ್ಲ, ಈ ನಾಡ ಕಛೇರಿಯಲ್ಲಿ ಕೆಲಸ ಮಾಡುತ್ತಿರುವವರಿಗೆ ಪ್ರೊಮೇಷನ್ ಕೊಟ್ಟು ಎಲ್ಲಿಗೆ ಹಾಕಬೇಕು ಎಂಬುದನ್ನು ಯಾರೋ ಕೆಲವು ಅಧಿಕಾರಿಗಳು ಒತ್ತಾಯ ತಂದು ಆ ರೀತಿ ಕಾಗದ ಬರೆದಿದ್ದಾರೆ. ಅದನ್ನು ನಂಬಬೇಡಿ, ಅದಕ್ಕೆ ಯಾವುದೇ ರೀತಿಯ ಮಾನ್ಯತೆಯನ್ನು ಕೊಡಬಾರದು. ಅವರು ಮಾಡುತ್ತಿರುವ ಉದ್ದೇಶ ಬೇರೆಯಾಗಿದೆ, ನಾಡ ಕಛೇರಿಗಳನ್ನು ಇಟ್ಟುಕೊಳ್ಳಬೇಕು ಎನ್ನುವುದರಲ್ಲಿ ಅರ್ಥವಿಲ್ಲ.

(ಉತ್ತರ ಇಲ್ಲ)

ರಾಜ್ಯದಲ್ಲಿರುವ ಉದ್ಯೋಗ ವಿನಿಮಯ ಕೇಂದ್ರಗಳ ಸಂಖ್ಯೆ

1304 - ಶ್ರೀ ಹೆಚ್.ಎಂ. ರೇವಣ್ಣ (ಮಾಗಡಿ) : ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ರಾಜ್ಯದಲ್ಲಿರುವ ಉದ್ಯೋಗ ವಿನಿಮಯ ಕೇಂದ್ರಗಳ ಸಂಖ್ಯೆ ಎಷ್ಟು?

ಆ) ಬೆಂಗಳೂರು ನಗರ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿರುವ ಉದ್ಯೋಗ ವಿನಿಮಯ ಕೇಂದ್ರಗಳ ಸಂಖ್ಯೆ ಎಷ್ಟು?

ಇ) ಬೆಂಗಳೂರು ನಗರ ಹಾಗೂ ಗ್ರಾಮಾಂತರ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ನೊಂದಾಯಿಸಿರುವ ಅಭ್ಯರ್ಥಿಗಳ ಒಟ್ಟು ಸಂಖ್ಯೆ ಎಷ್ಟು ?

ಈ) ಈ ಮೇಲ್ಕಂಡ ಉದ್ಯೋಗ ವಿನಿಮಯ ಕೇಂದ್ರದಿಂದ ಸಂದರ್ಶನಗಳಿಗೆ ಕರೆ ಕಳುಹಿಸುವಾಗ ಅನುಸರಿಸುವ ನೀತಿ ನಿಯಮಗಳೇನು?

ಶ್ರೀ ಸಿ.ಎಸ್. ನಾಡಗೌಡ (ಅಫ್ಜಲ್‌ಪುರ) (ಕಾರ್ಮಿಕ ರಾಜ್ಯ ಸಚಿವರು):

ಅ) 32

ಆ) ಬೆಂಗಳೂರು ನಗರ - 6

ಬೆಂಗಳೂರು ಗ್ರಾಮಾಂತರ ಜಿಲ್ಲೆ - ಇಲ್ಲ

ಇ) ಒಟ್ಟು 4,23879

ಈ) ಉದ್ಯೋಗ ವಿನಿಮಯ ಕೇಂದ್ರಗಳಿಗೆ ಅಧಿಸೂಚಿತವಾದ ಹುದ್ದೆಗಳಿಗೆ ನಿಗಧಿಪಡಿಸಿದ ವಿದ್ಯಾರ್ಹತೆ, ಪಂಗಡ ವಯೋಮಿತಿ ಇವುಗಳನ್ನು ಹೊಂದಿರುವ ಅಭ್ಯರ್ಥಿಗಳನ್ನು ನೊಂದಣಿ ಜೇಷ್ಠತೆ ಆಧಾರದ ಮೇರೆಗೆ ಪುರಸ್ಕರಿಸಲಾಗುತ್ತಿದೆ.

ಶ್ರೀ ಹೆಚ್.ಎಂ.ರೇವಣ್ಣ : ಸಭಾದ್ಯಕ್ಷರೆ, ಉತ್ತರದಲ್ಲಿ ಬೆಂಗಳೂರು ನಗರದಲ್ಲಿ 6 ಉದ್ಯೋಗ ವಿನಿಮಯ ಕೇಂದ್ರಗಳಿವೆ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಉದ್ಯೋಗವಿನಿಮಯ ಕೇಂದ್ರ ಇಲ್ಲವೆಂದು ತಿಳಿಸಿದ್ದಾರೆ. ಬೆಂಗಳೂರು ಮೂರು ಜಿಲ್ಲೆಗಳಿಗೆ ಒಳಪಡುತ್ತದೆ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಮತ್ತು ಸಿಟಿ ಪ್ರದೇಶ. ಈಗ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಉದ್ಯೋಗ ವಿನಿಮಯ ಕೇಂದ್ರವನ್ನು ಸ್ಥಾಪಿಸುತ್ತೀರಾ?

ಎರಡನೆಯದು, 4,23,879 ಜನ ಇವತ್ತು ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ನಲ್ಲಿ ದಾಖಲು ಮಾಡಿದ್ದಾರೆ. ತಾವು ಎಲ್ಲಾ ಇಲಾಖೆಗಳಲ್ಲಿ ಸಂದರ್ಶನ ಕರೆಯುವಾಗ ತಮ್ಮ ಉದ್ಯೋಗ ವಿನಿಮಯ ಕೇಂದ್ರದಿಂದ ಕರೆಯುತ್ತಿಲ್ಲ. ಉದಾಹರಣೆಗೆ ಕೆ.ಇ.ಬಿ.ಯಲ್ಲಿ ಡೈರೆಕ್ಟ್ ಆಗಿ ಅಭ್ಯರ್ಥಿಗಳನ್ನು ಕರೆದಿದ್ದಾರೆ. ಇದರಿಂದ ಉದ್ಯೋಗ ವಿನಿಮಯ ಕೇಂದ್ರದಲ್ಲಿ ಹೆಸರುಗಳನ್ನು ನೊಂದಾಯಿಸುವುದರಿಂದ ಏನು ಪ್ರಯೋಜನವಾಗುವುದಿಲ್ಲ, ಎನ್ನುವ ಒಂದು ಪರಿಸ್ಥಿತಿ ಇದೆ. ಆದುದರಿಂದ ಈ ಇಲಾಖೆಯನ್ನು ಏನಾದರೂ ಚುರುಕುಗೊಳಿಸುತ್ತೀರ. ಎಲ್ಲಾ ನೇಮಕಾತಿಯನ್ನು ಉದ್ಯೋಗ ವಿನಿಮಯ ಕೇಂದ್ರದಿಂದಲೇ ಆಗುವ ರೀತಿ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಸಿ.ಎಸ್. ನಾಡಗೌಡ : ಸನ್ಮಾನ್ಯ ಅಧ್ಯಕ್ಷರೇ, ಈ ಬೆಂಗಳೂರು ರೂರಲ್ಲಿ ಪ್ರತ್ಯೇಕವಾಗಿ ಒಂದು ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಪ್ರಾರಂಭ ಮಾಡುವ ಬಗ್ಗೆ ಸರ್ಕಾರ ಈಗಾಗಲೇ ವಿಚಾರ ಮಾಡಿದೆ. ಆ ದೃಷ್ಟಿಯಿಂದ ನಾವು ಮುಂದುವರಿಯುತ್ತೇವೆ ಎನ್ನುವಂಥ ಆಶ್ವಾಸನೆಯನ್ನು ಸಭೆಗೆ ಕೊಡುತ್ತಿದ್ದೇನೆ. ಈಗಾಗಲೇ ಸರ್ಕಾರ ಪ್ರತಿಯೊಂದು ಇಲಾಖೆಗೆ ಸರ್ಕ್ಯುಲರ್ ಇಶ್ಯು ಮಾಡಿದೆ. ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಮುಖಾಂತರವೇ ಇಂಟರ್‌ವ್ಯೂಗಳನ್ನು ಕರೆಯಬೇಕೆಂದು ಸರ್ಕ್ಯುಲರ್ ಇಷ್ಯೂ ಮಾಡಿದೆ. ಯಾರು ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಬಿಟ್ಟು ಪಬ್ಲಿಕ್ ಮಾಡಿ ಇಂಟರ್‌ವ್ಯೂ ಕರೆದಿದ್ದಾರೊ, ಅಂಥ ಯಾರಾದರೂ ನಮಗೆ ಮಾಹಿತಿ ತಂದರೆ ಖಂಡಿತವಾಗಿಯೂ ಪುನಃ ಸರ್ಕಾರದವತಿಯಿಂದ ಎಲ್ಲ ಇಲಾಖೆಗಳಿಗೂ ಮತ್ತೊಮ್ಮೆ ಸರ್ಕ್ಯುಲರ್ ಇಶ್ಯು ಮಾಡಿಸುತ್ತೇನೆ. ಮತ್ತೆ ಈ ಇಲಾಖೆಯನ್ನು ಚುರುಕುಗೊಳಿಸುವುದು ಅಂದರೆ ಯಾವ ರೀತಿಯಲ್ಲಿ ಚುರುಕುಗೊಳಿಸಬೇಕೆಂಬುದನ್ನು ತಾವು ಹೇಳಬೇಕು. It is a streatheing body ನಾವು ಮಾಡುವಂಥಾದ್ದು ಏನಿದೆ ಅದನ್ನು ಆದ್ಯತೆಯ ಮೇರೆಗೆ ಮಾಡುತ್ತೇವೆ ಮತ್ತು ಸರಿಯಾದ ರೀತಿಯಿಂದ ಮಾಡುತ್ತೇವೆ. ಚುರುಕುಗೊಳಿಸುವಂಥಾದ್ದು ಅನ್ನುವ ಪದ ನನಗೆ ಅರ್ಥವಾಗಲಿಲ್ಲ.

ಶ್ರೀ ಹೆಚ್.ಎಂ. ರೇವಣ್ಣ : ಸನ್ಮಾನ್ಯ ಅಧ್ಯಕ್ಷರೇ ಪ್ರಶ್ನೆ ಇಷ್ಟೆ, 4ಲಕ್ಷದ 23ಸಾವಿರ ಜನ ಅಲ್ಲಿ ಏನು ನೊಂದಣಿ ಮಾಡಿದಾರೊ ಅವರಿಗೆ ಉದ್ಯೋಗ ಸಿಗುವ ಖಾತರಿಯಾಗಬೇಕು. ಅವರಿಗೆ ಆದ್ಯತೆಯ ಮೇಲೆ ಉದ್ಯೋಗ ಕೊಡಿಸುವುದಕ್ಕೆ ಇಲಾಖೆಗೆ ಬರೆಯುತ್ತೇವೆಂದು ಹೇಳಿದಿರಿ. ಇದು ತಮ್ಮ ಇಲಾಖೆಗೆ ಮಾತ್ರ

ಸಂಬಂಧಪಟ್ಟ ಪ್ರಶ್ನೆಯಲ್ಲ. ಸರ್ಕಾರದವರೇ ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕು. ಮಾನ್ಯ ಮುಖ್ಯಮಂತ್ರಿಗಳ ಮೇಲೆ ಪ್ರಭಾವ ತೆಗೆದುಕೊಂಡು ಬಂದು ನಿಜವಾಗಿ ಉದ್ಯೋಗ ವಿನಿಮಯ ಕೇಂದ್ರ ಇದೆ ಎನ್ನುವ ರೀತಿಯಲ್ಲಿ ಕೆಲಸ ಮಾಡಬೇಕು. ಅಲ್ಲಿ ನೊಂದಾಯಿಸಿದ ಅಭ್ಯರ್ಥಿ ಅಲ್ಲಿಗೆ ಹೋಗುವುದಕ್ಕೆ ಬೇಜಾರಾಗುತ್ತಿದೆ. 10-15 ವರ್ಷಗಳಿಂದ ಒಂದೂ ಇಂಟರ್‌ವ್ಯೂ ಬರುತ್ತಿಲ್ಲ. ಇನ್ನು ಯಾವ ರೀತಿ ಚುರುಕುಗೊಳಿಸಿ ಎಂದು ಕೇಳಬೇಕು.

ಶ್ರೀ ಸಿ.ಎಸ್. ನಾಡಗೌಡ : ಈ ವಿಷಯವನ್ನು ಪರಿಶೀಲಿಸೋಣ.

ರಾಜ್ಯದಲ್ಲಿ ವಿವಿಧ ವರ್ಗದ ಕಾರ್ಮಿಕರಿಗೆ ಕನಿಷ್ಠ ವೇತನ

1310 - ಶ್ರೀ ಪಿ.ಜಿ.ಆರ್.ಸಿಂಧ್ಯಾ (ಕನಕಪುರ), ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ವಿವಿಧ ವರ್ಗಗಳ ಕಾರ್ಮಿಕರಿಗೆ ಕನಿಷ್ಠವೇತನವನ್ನು ನಿಗದಿಪಡಿಸಿದ್ದು ಯಾವಾಗ? (ವಿಭಾಗವಾರು ಅಂಕಿ-ಅಂಶಗಳನ್ನು ಕೊಡುವುದು)

ಆ) ಈ ವೇತನವನ್ನು ಪರಿಷ್ಕರಿಸುವ ಯೋಜನೆ ಸರ್ಕಾರದ ಮುಂದೆ ಇದೆಯೇ?

ಇ) ಇದ್ದಲ್ಲಿ, ಯಾವಾಗ ಮಾಡಲಾಗುವುದು;

ಈ) ಕನಿಷ್ಠ ವೇತನ ನಿಗದಿ ಮಾಡದೇ ಇರುವ ವಿಭಾಗಗಳು ಯಾವುವು?

ಶ್ರೀ ಸಿ.ಎಸ್.ನಾಡಗೌಡ(ಕಾರ್ಮಿಕ ರಾಜ್ಯ ಸಚಿವರು) :

ಅ) 36ಸೆಡ್ಯೂಲ್‌ಗಳಿಗೆ ಕನಿಷ್ಠ ವೇತನ ನಿಗಧಿ ಮಾಡಲಾಗಿದೆ.(ಪಟ್ಟಿ ಲಗತ್ತಿಸಲಾಗಿದೆ).

ಆ) ಹೌದು.

ಇ) ಕ್ರಮ ಕೈಗೊಳ್ಳಲಾಗುತ್ತಿದೆ.

ಈ) 13 (ಪಟ್ಟಿ ಲಗತ್ತಿಸಲಾಗಿದೆ)

EMPLOYMENTS FOR WHICH MINIMUM WAGES HAS BEEN FIXED

Sl. No.	*Name of the Employment*	*Date of notification.*
	Employment in	
1.	Residential Hotels & Eating Houses.	14.2.86
2.	Tailoring	12.2.86
3.	Coffee Curing	27.3.86
4.	Film Industry	25.5.84
5.	Agarbathi	5.6..84
6.	Cotton Ginning & Pressing.	25.5.84
7.	Rice, Dhall & Flour Mills.	25.5.84
8.	Agriculture.	12.7.88
9.	Printing press.	25.5.84
10.	Ceramics, Stone Ware & Potteries works.	25.5.84
11.	Construction or maintenance of Road or Building Operations.	5.6.84